

ಗೊತ್ತಾಗಿದ್ದೋ... ಅಥವಾ ನಾಲ್ಕು ಅಥವಾ ಆರರ ಮಗ್ಗಿ ಹೇಳುವಾಗಲೂ ಹೀಗೆ ತಪ್ಪಿಸ್ತಿದ್ದಾ ಅವ್ನು?'

'ಇಲ್ಲ ಸರ್, ನಾನು ದಿನಾ ರಾತ್ರಿ ಮಗ್ಗಿಯನ್ನು ಮಾತ್ರ ಹಟ ಹಿಡಿದು ಕೂರಿಸಿ ಕೇಳ್ತೀನಿ ಸರ್... ಅದ್ರಲ್ಲೂ ಮೂರರ ಮಗ್ಗಿ... ಕೆಲವೊಮ್ಮೆ ಸಂಜೆನೂ ಕೇಳ್ತೀನಿ ಸರ್...'

ಅಕ್ಷಯ್‌ಕುಮಾರನ ಆ ಮಾತಿಗೆ ಡಾ. ವಾಹೀದ್ ಅವರಿಂದ ಮತ್ತೆ ಯಾವುದೇ ಪ್ರತಿಕ್ರಿಯೆ ಬರಲಿಲ್ಲ! ಅವ್ರು ಕೌಶಿಕನ ಹೋಂವರ್ಕ್ ಪುಸ್ತಕ, ಡ್ರಾಯಿಂಗ್ ಪುಸ್ತಕಗಳ ಇಂಚಿಂಚನ್ನು ಕಣ್ಣಿನಿಂದ ತೂಗುತ್ತಿದ್ದರು. ಹಾಗೆ ಕಣ್ಣಾಡಿಸುತ್ತಿದ್ದಂತೆ ಅವರ ಮುಖದ ಮೇಲಿನ ಕಿರುನಗೆಯೊಂದು ಬಲಿಯುತ್ತಲೇ ಹೋಯಿತು.

ಡಾಕ್ಟರ್ ತಕ್ಷಣವೇ, ಅಲ್ಲಿ ಸೇವಂತಿಗೆ, ಮಲ್ಲಿಗೆ ಪೊದೆಗಳ ಪಕ್ಕ ನಿಂತು ಹಳದಿ ಚಿಟ್ಟೆ ಹಿಡಿಯಲು ಇನ್ನಿಲ್ಲದಂತೆ ಕುಪ್ಪಳಿಸುತ್ತಿದ್ದ ಕೌಶಿಕನನ್ನು ಕರೆದರು. ಡಾಕ್ಟರ್ ಕರೆದೊಡನೆ ಮೆತ್ತಗೆ 'ಸ್ಕೂಟರ್ ಓಡಿಸುತ್ತಲೇ' ಬಂದು ಅವರೆದುರು ನಿಂತ ಕೌಶಿಕನಲ್ಲಿ ವಾಹೀದ್ ಅವರು, ಅವನ ಡ್ರಾಯಿಂಗ್ ಪುಸ್ತಕದಲ್ಲಿದ್ದ ಎರಡು ಚಿತ್ರಗಳನ್ನು ತೋರಿಸಿದವರೇ,

'ಏನೋ ಮಾರಾಯ... ಈ ಚಿತ್ರದಲ್ಲಿರೋ ಮನುಷ್ಯನಿಗೆ ಕೈ ಕಾಲು, ನೀಲಿ ಪ್ಯಾಂಟು, ಕೆಂಪು ಶರ್ಟು, ಕಪ್ಪು ಬೆಲ್ಟು, ಹಸಿರು ಟೈ ಎಲ್ಲ ಇದೆ. ಆದ್ರೆ ತಲೆನೇ ಇಲ್ವಲ್ಲೋ? ತಲೆ ಜಾಗಕ್ಕೆ ದೊsssಡ್ಡ ಸೊನ್ನೆ ಕೂರಿಸಿ, ಅದ್ರೊಳಗೆ ಮೂರ್ನಾಕ್ಲಿ ಹದಿನೆಂಟು, ಆರ್‌ಮೂರ್ಲಿ ಹನ್ನೆರಡು, ಏಳೆಂಟ್ಲಿ ಎಪ್ಪತ್ತೆಂಟ ಅಂತಾ ಅಂಕಿಯಲ್ಲಿ ಬರೆದಿದ್ಯಲ್ಲೋ!!... ಯಾಕೋ?! ಈತನ ಕಣ್ಣುಮೂಗುಬಾಯಿ ಕಿವಿ ಎಲ್ಲ ಎಲ್ಲಿಯೋ ಮಾರಾಯ?...'

ಕೌಶಿಕ, ತನ್ನನ್ನೇ ನೋಡಿ ಮೆಲು ನಗುತ್ತಿದ್ದ ಡಾಕ್ಟ್ರನ್ನೊಮ್ಮೆ ಮತ್ತು ಅತೀ ಕೊಂಡಾಟದ ಮುಖ ಮಾಡಿ ತನ್ನನ್ನೇ ದಿಟ್ಟಿಸುತ್ತಿದ್ದ ಅಮ್ಮನನ್ನೊಮ್ಮೆ ನೋಡಿ ಪಕಪಕನೆ ಕಣ್ಣು ಮಿಂಚಿಸಿ ನಕ್ಕ. ಆದರೆ ಅಪ್ಪನನ್ನು ಅಪ್ಪಿತಪ್ಪಿಯೂ ದಿಟ್ಟಿಸಲಿಲ್ಲ. ಅಮ್ಮ ಕುಮುದ ಅಂದಳು 'ಯಾರೋ ಚೆನ್ನು ಅದು... ಯಾರ ಚಿತ್ರವೋ ಅದು? ಅವನ ತಲೆ ಬುರುಡೆ ತುಂಬ ಮಗ್ಗಿಗಳನ್ನೇ ಬರೆದಿದ್ಯೆಲ್ಲೋ?...' ಕೌಶಿಕ,